**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ನ್ಯಾಯಾಲಯ, ಚಿಂತಾಮಣಿ.**

**ಸಿ.ಸಿ.ನಂ. 728/2020**

**ಫಿರ್ಯಾದುದಾರರು** : ಚಿಂತಾಮಣಿ ಗ್ರಾಮಾಂತರ ಪೋಲೀಸ್ ಠಾಣೆ

ವಿರುದ್ಧ

**ಆರೋಪಿತರು**: ಎ 1. ಕೃಷ್ಣಪ್ಪ ಬಿನ್ ನಾರಾಯಣಪ್ಪ,
ವಯಾಃ 40 ವರ್ಷ,

ಎ 2. ಪ್ರಭಾಕರ ಬಿನ್ ಲೇಟ್ ನಾರಾಯಣಪ್ಪ,
ವಯಾಃ 35 ವರ್ಷ,

ಎ 3. ಶ್ರೀಮತಿ. ಶಿವಮ್ಮ ಕೋಂ ಪ್ರಭಾಕರ
ವಯಾಃ 28 ವರ್ಷ,

ಎ 4. ಗಂಗಪ್ಪ ಬಿನ್ ವೆಂಕಟಸ್ವಾಮಿ,
ವಯಾಃ 25 ವರ್ಷ,

ಎ 5. ತಿಪ್ಪಮ್ಮ ಕೋಂ ಕೃಷ್ಣಪ್ಪ,
ವಯಾಃ 30 ವರ್ಷ,

ಎ 6. ಶ್ರೀಮತಿ. ಮುನಿಯಮ್ಮ
ವಯೂಃ 35 ವರ್ಷ,

ಆರೋಪಿ 1 ರಿಂದ 6 ರವರ
ವಾಸಃ ಬ್ರಾಹ್ಮಣರದಿನ್ನೆ ಗ್ರಾಮ,
ಚಿಂತಾಮಣಿ ತಾಲ್ಲೂಕು,
ಚಿಕ್ಕಬಳ್ಳಾಪುರ.

: **ದೋಷಾರೋಪಣೆ** :

**ಶ್ರೀಮತಿ.ಹರ್ಷಿತ, ಬಿ.ಎ., ಎಲ್‌ಎಲ್.ಬಿ.,** ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ., ಆದ ನಾನು ಈ ಮೂಲಕ ಆರೋಪಿತರಾದ ನಿಮ್ಮನ್ನು ಈ ಕೆಳಕಂಡಂತೆ ಆರೋಪಕ್ಕೆ ಗುರಿಪಡಿಸುತ್ತೇನೆ.

ದಿನಾಂಕ 04-09-2020 ರಂದು ರಾತ್ರಿ ಸುಮಾರು 11.00 ರ ಸಮಯದಲ್ಲಿ ಚಿಂತಾಮಣಿ ಗ್ರಾಮಾಂತರ ಪೊಲೀಸ್ ಠಾಣಾ ಸರಹದ್ದಿಗೆ ಸೇರಿದ ಬ್ರಾಹ್ಮಣರದಿನ್ನೆ ಗ್ರಾಮದಲ್ಲಿ ಚಾಸಾ-1 ಮತ್ತು 2 ರವರು ಅವರ ವಾಸದ ಮನೆಯಲ್ಲಿ ಮಲಗಿದ್ದಾಗ, ಆರೋಪಿತರಾದ ನೀವುಗಳು ಅವರ ಪಿತ್ರಾರ್ಜಿತ ಆಸ್ತಿಯ ವಿಚಾರದ ವೈಷಮ್ಯದ ಹಿನ್ನಲೆಯಲ್ಲಿ ಅಕ್ರಮ ಗುಂಪು ಕಟ್ಟಿಕೊಂಡು ಬಂದು ಅಕ್ರಮ ಕೂಟದ ಸದಸ್ಯರಾಗಿರುತ್ತೀರಿ, ಆ ಮೂಲಕ ನೀವು **ಭಾ.ದಂ.ಸಂ. ಕಲಂ 143 ಸಹವಾಚಕ ಕಲಂ 149** ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ ಎಂದು ದೋಷಾರೋಪಣೆ ಸಲ್ಲಿಸಲಾಗಿದೆ.

**ಎರಡನೇಯದಾಗಿ** ಅದೇ ದಿನ, ಅದೇ ಸಮಯ ಮತ್ತು ಅದೇ ಸ್ಥಳದಲ್ಲಿ, ಅದೇ ಸಂಬಂಧವಾಗಿ, ಆರೋಪಿತರಾದ ನೀವುಗಳು ಏಕೋದ್ದೇಶದಿಂದ ಚಾಸಾ-1 ರವರ ವಾಸದ ಮನೆಯ ಬಳಿಗೆ ಹೋಗಿ ಮನೆಯಲ್ಲಿದ್ದ ಚಾಸಾ-1 ಮತ್ತು 2 ರವರನ್ನು ಕುರಿತು ಬೋಳಿ ನನ್ನ ಮಕ್ಕಳೇ ನಿಮ್ಮಮ್ಮನೇ ಕೇಯಾ, ನಿಮಗೆ ಆಸ್ತಿಯಲ್ಲಿ ಭಾಗ ಕೊಡಬೇಕಾ ಎಂದು ಅವ್ಯಾಚ್ಯ ಶಬ್ದಗಳಿಂದ ಬೈದು ಶಾಂತಿ ಭಂಗ ಉಂಟು ಮಾಡಿರುತ್ತೀರಿ, ಆ ಮೂಲಕ **ಭಾ. ದಂ.ಸಂ. ಕಲಂ 504 ಸಹವಾಚಕ ಕಲಂ** 149 ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ ಎಂದು ದೋಷಾರೋಪಣೆ ಸಲ್ಲಿಸಲಾಗಿದೆ.

**ಮೂರನೇಯದಾಗಿ** ಅದೇ ದಿನ, ಅದೇ ಸಮಯ ಮತ್ತು ಅದೇ ಸ್ಥಳದಲ್ಲಿ, ಅದೇ ಸಂಬಂಧವಾಗಿ ಆರೋಪಿತರಾದ ನೀವುಗಳು ಏಕೋದ್ದೇಶದಿಂದ ಚಾಸಾ-1 ಮತ್ತು 2 ರವರ ಮನೆಯ ಬಳಿಗೆ ಗಲಾಟೆ ಮಾಡುತ್ತಿದ್ದು ಏಕೆ ಈ ರೀತಿ ಗಲಾಟೆ ಮಾಡುತ್ತಿದ್ದೀರಾ ಎಂದು ಕೇಳಿದಾಗ ಚಾಸಾ-1 ಮತ್ತು 2 ರವರ ವಾಸದ ಮನೆಯೊಳಗೆ ಅತಿಕ್ರಮ ಪ್ರವೇಶ ಮಾಡಿರುತ್ತೀರಿ, ಆ ಮೂಲಕ **ಭಾ. ದಂ.ಸಂ. ಕಲಂ 448 ಸಹವಾಚಕ ಕಲಂ** 149 ರಡಿಯಲ್ಲಿ ದಂಡನೀಯ

ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ ಎಂದು ದೋಷಾರೋಪಣೆ ಸಲ್ಲಿಸಲಾಗಿದೆ.

**ನಾಲ್ಕನೇಯದಾಗಿ** ಅದೇ ದಿನ, ಅದೇ ಸಮಯ ಮತ್ತು ಅದೇ ಸ್ಥಳದಲ್ಲಿ, ಅದೇ ಸಂಬಂಧವಾಗಿ ಆರೋಪಿತರಾದ ನೀವುಗಳು ಏಕೋದ್ದೇಶದಿಂದ ಚಾಸಾ–2 ರವರನ್ನು ಮನೆಯಿಂದ ಹೊರಗೆ ಎಳೆದುಕೊಂಡು ಹೋಗಿದ್ದು, 1 ರಿಂದ 4 ನೇ ಆರೋಪಿತರಾದ ನೀವುಗಳು ಚಾಸಾ–2 ರವರನ್ನು ಸುತ್ತುವರಿದು ಕೈಗಳಿಂದ ಮೈಮೇಲೆ ಹೊಡೆದು, ಕಾಲುಗಳಿಂದು ಒದ್ದು ನೋವುಂಟು ಮಾಡಿದ್ದು, ಆಗ ಚಾಸಾ–1 ರವರು ಜಗಳ ಬಿಡಿಸಲು ಅಡ್ಡ ಹೋದಾಗ 5 ಮತ್ತು 6 ನೇ ಆರೋಪಿತರಾದ ನೀವುಗಳು ಚಾಸಾ–1 ರವರ ಜುಟ್ಟನ್ನು ಹಿಡಿದು ಎಳೆದಾಡಿ, ಕೈಗಳಿಂದ ಮೈಮೇಲೆ ಹೊಡೆದು, ಕಾಲುಗಳಿಂದ ಒದ್ದು, ಚಾಸಾ–1 ರವರಿಗೆ ಸಾಮಾನ್ಯ ಸ್ವರೂಪದ ಗಾಯಗಳನ್ನುಂಟು ಮಾಡಿರುತ್ತೀರಿ, ಆ ಮೂಲಕ **ಭಾ. ದಂ.ಸಂ. ಕಲಂ 323 ಸಹವಾಚಕ ಕಲಂ** 149 ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ ಎಂದು ದೋಷಾರೋಪಣೆ ಸಲ್ಲಿಸಲಾಗಿದೆ.

**ಕೊನೇಯದಾಗಿ**, ಅದೇ ದಿನ, ಅದೇ ಸಮಯ ಮತ್ತು ಅದೇ ಸ್ಥಳದಲ್ಲಿ, ಅದೇ ಸಂಬಂಧವಾಗಿ 1 ನೇ ಆರೋಪಿಯಾದ ನೀವು ಏಕೋದ್ದೇಶದಿಂದ ಚಾಸಾ–1 ಮತ್ತು 2 ಕುರಿತು ಆಸ್ತಿಯ ವಿಚಾರಕೆ ಬಂದರೆ ನಿಮ್ಮನ್ನು ಮುಗಿಸಿಬಿಡುತ್ತೇನೆಂದು ಪ್ರಾಣ ಬೆದರಿಕೆ ಹಾಕಿರುತ್ತೀರಿ, ಆ ಮೂಲಕ **ಭಾ. ದಂ.ಸಂ. ಕಲಂ** 506 **ಸಹವಾಚಕ ಕಲಂ** 149 ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ ಎಂದು ದೋಷಾರೋಪಣೆ ಸಲ್ಲಿಸಲಾಗಿದೆ.

ಸದರಿ ಆರೋಪಗಳ ಮೇಲೆ ನೀವು ಈ ನ್ಯಾಯಾಲಯದಿಂದ ಆರೋಪ ವಿಚಾರಣೆಗೆ ಗುರಿಯಾಗತಕ್ಕದೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

(ಆರೋಪಿಗಳ ವಿಚಾರಣೆಯನ್ನು ನನ್ನ ಹಾಜರಾತಿಯಲ್ಲಿ ತೆಗೆದುಕೊಂಡು, ಆಪಾಧಾನೆಗಳನ್ನು ಅವರಿಗೆ ವಿವರವಾಗಿ ಓದಿ ಹೇಳಿದ ಮೇಲೆ ಅದನ್ನು ನನ್ನ ವೈಯಕ್ತಿಕ ಸುನಾವಣೆಯಲ್ಲಿ ದಾಖಲಿಸಿದ್ದು ಆಪಾಧನೆಗಳು ಪೂರ್ಣಶಃ ಸರಿಯಾದ ಹೇಳಿಕೆಯಾಗಿದೆ.)

**ಸ್ಥಳಃ ಚಿಂತಾಮಣಿ.**

**ದಿನಾಂಕಃ13-06-2025.** **ಸಹಿ/-**

**ಅಪರ ಸಿವಿಲ್ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ., ಚಿಂತಾಮಣಿ.**

**<u>ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ನ್ಯಾಯಾಲಯ, ಚಿಂತಾಮಣಿ.</u>**

**<u>ಸಿ.ಸಿ.ನಂ. 728/2020</u>**

**<u>ಫಿರ್ಯಾದುದಾರರುಃ</u>** ಸರ್ಕಾರದ ಪರವಾಗಿಃ

ಚಿಂತಾಮಣಿ ಗ್ರಾಮಾಂತರ ಪೋಲೀಸ್ ಠಾಣೆ

ವಿರುದ್ಧ

**<u>ಆರೋಪಿಃ</u>** ಎ 1. ಕೃಷ್ಣಪ್ಪ ಬಿನ್ ನಾರಾಯಣಪ್ಪ,

ಎ 2. ಪ್ರಭಾಕರ ಬಿನ್ ಲೇಟ್ ನಾರಾಯಣಪ್ಪ,

ಎ 3. ಶ್ರೀಮತಿ. ಶಿವಮ್ಮ ಕೋಂ ಪ್ರಭಾಕರ

ಎ 4. ಗಂಗಪ್ಪ ಬಿನ್ ವೆಂಕಟಸ್ವಾಮಿ,

ಎ 5. ತಿಪ್ಪಮ್ಮ ಕೋಂ ಕೃಷ್ಣಪ್ಪ,

ಎ 6. ಶ್ರೀಮತಿ. ಮುನಿಯಮ್ಮ

1. ನೀವು ಮೇಲಿ ಓದಿ ಹೇಳಿದ ಮತ್ತು ವಿವರಿಸಿದ ದೋಷಾರೋಪಣೆಯನ್ನು ಅರ್ಥೈಸಿಕೊಂಡಿರುವಿರೋ ?

ಉತ್ತರಃ

ಆರೋಪಿ-1

ಆರೋಪಿ-2

ಆರೋಪಿ-3

ಆರೋಪಿ-4

ಆರೋಪಿ-5

ಆರೋಪಿ-6

2. ಮೇಲೆ ಮಾಡಿದ ಆಪಾಧನೆಗಳನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೆನ್ನುವಿರೋ?

ಉತ್ತರಃ

ಆರೋಪಿ-1

ಆರೋಪಿ-2

ಆರೋಪಿ-3

ಆರೋಪಿ–4

ಆರೋಪಿ–5

ಆರೋಪಿ–6

(ಆರೋಪಿಯ ವಿಚಾರಣೆಯನ್ನು ನನ್ನ ಹಾಜರಾತಿಯಲ್ಲಿ ತೆಗೆದುಕೊಂಡು, ಆಪಾಧಾನೆಗಳನ್ನು ಅವರಿಗೆ ವಿವರವಾಗಿ ಓದಿ ಹೇಳಿದ ಮೇಲೆ ಅದನ್ನು ನನ್ನ ವೈಯಕ್ತಿಕ ಸುನಾವಣೆಯಲ್ಲಿ ದಾಖಲಿಸಿದ್ದು ಆಪಾಧನೆಗಳು ಪೂರ್ಣಶಃ ಸರಿಯಾದ ಹೇಳಿಕೆಯಾಗಿದೆ.)

**ಸ್ಥಳಃ ಚಿಂತಾಮಣಿ.** **ಸಹಿ/–**

**ದಿನಾಂಕಃ 13–06–2025.** **ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,**

**ಚಿಂತಾಮಣಿ.**

ಆರೋಪಿತರ ಸಹಿಃ